# ಆಡಳಿತಾಧಿಕಾರಿಗಳ ಕಛೇರಿಯ ಕರ್ತವ್ಯ ನಿರ್ವಹಣೆಯ ಮಾಹಿತಿ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯು ಕೃಷಿ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ವಿಷಯಗಳ ಬಗ್ಗೆ ಕರ್ತವ್ಯ ನಿರ್ವಹಿಸುತ್ತದೆ; ಬೋಧಕ ಮತ್ತು ಬೋಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ವಿಚಾರಗಳು ಈ ಕಛೇರಿಯಿಂದ ಕಾರ್ಯರೂಪಕ್ಕೆ ತರಲಾಗುವುದು. ಕೃಷಿ ವಿಶ್ವವಿದ್ಯಾನಿಲಯದ ಶಿಕ್ಷಕ ಮತ್ತು ನೌಕರ ವೃಂದಗಳಿಗೆ ಸಂಬಂಧಪಟ್ಟ ಕಾರ್ಯ ಚಟುವಟಿಕೆಗಳು ಮಾನ್ಯ ಕುಲಪತಿಗಳ ನಿರ್ದೇಶನ ಮತ್ತು ಅನುಮೋದನೆ ಪಡೆದು ಕಾರ್ಯ ನಿರ್ವಹಿಸಲ್ಪಡುತ್ತವೆ. ಈ ಕಛೇರಿಯಲ್ಲಿ ಬೋಧಕ & ಬೋಧಕೇತರ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ನೇಮಕಾತಿ ಜಾಹೀರಾತು ಹೊರಡಿಸಲಾಗುವುದು ಮತ್ತು ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿಯ ಆದೇಶ ಹೊರಡಿಸುವುದು. ಪರಿಕ್ಷಾರ್ಥ ಅವಧಿಯ ಬಗ್ಗೆ ಆದೇಶ ಹೊರಡಿಸುವುದು; ಕಾಲಕಾಲಕ್ಕೆ ಕೃವಿವಿ ಶಿಕ್ಷಕರು ಮತ್ತು ನೌಕರ ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿಯನ್ನು ನಿಗಧಿಪಡಿಸುವುದು; ಪರಿಷ್ಕøತ ವೇತನದ ಆದೇಶ/ಯುಜಿಸಿ/ರಾಜ್ಯ ಸರ್ಕಾರದಿಂದ ಪರಿಷ್ಕøತಗೊಂಡ ಆದೇಶವನ್ನು ಈ ಕಛೇರಿಯಿಂದ ನೌಕರ ಸಿಬ್ಬಂದಿಗಳಿಗೆ ವೇತನ ನಿಗಧಿಪಡಿಸಲು ಕಛೇರಿ ಆದೇಶ ಹೊರಡಿಸಲಾಗುವುದು; ಕಾಲ ಕಾಲಕ್ಕೆ ಬೋಧಕ ಸಿಬ್ಬಂದಿಗಳ ಮುಂಬಡ್ತಿಗೆ ಅರ್ಜಿಯನ್ನು ಸಲ್ಲಿಸಲು ಸುತ್ತೋಲೆ ಹೊರಡಿಸಿ ನಂತರ ಮುಂಬಡ್ತಿ ಆದೇಶ ನೀಡಲಾಗುವುದು. ಹಾಗು, ಬೋಧಕ/ಬೋಧಕೇತರ ನೌಕರ ಸಿಬ್ಬಂದಿಗಳಿಗೆ ಮುಂಬಡ್ತಿಯ ಆದೇಶವನ್ನು ನೀಡಲಾಗುವುದು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಭೋಧಕ ಮತ್ತು ಬೋಧಕೇತರ ನೌಕರ ಸಿಬ್ಬಂದಿಗಳಿಗೆ ಕಾರ್ಯಗಾರ/ತರಬೇತಿ ಕಾರ್ಯಕ್ರಮಕ್ಕೆ (ವೈಜ್ಞಾನಿಕ ಪ್ರಕಟಣೆ ಕಳುಹಿಸಲು) ರಾಜ್ಯ/ಹೊರರಾಜ್ಯ, ಬೇರೆ ರಾಷ್ಟ್ರಗಳಿಗೆ ಹೋಗಿಬರಲು ಕೃವಿವಿ ಅನುಮತಿಯ ಆದೇಶಗಳನ್ನು ನೀಡಲಾಗುವುದು, ಪಾಸ್‍ಪೋರ್ಟ್ & ವಿದೇಶಕ್ಕೆ ಹೋಗಿಬರಲು ವೀಸಾ ಪಡೆಯಲು ಅನುಮತಿಯ ಪತ್ರ ನೀಡಲಾಗುವುದು; ಬೋಧಕ ಸಿಬ್ಬಂದಿಗಳ ಉನ್ನತ ವ್ಯಾಸಂಗಕ್ಕೆ ಎರವಲು ಸೇವೆ/ಸ್ವಂತ ರಜೆ ಮೇಲೆ ವಿದ್ಯಾಭ್ಯಾಸಕ್ಕೆ ಹೋಗಲು ಅನುಮತಿಯನ್ನು ನೀಡಲಾಗುವುದು; ಕೃಷಿ ವಿಶ್ವವಿದ್ಯಾನಿಲಯ ನೌಕರ ಸಿಬ್ಬಂದಿಗಳು ಸ್ವಯಂ ನಿವೃತ್ತಿ ಪತ್ರ ನೀಡಿದಾಗ ಅವರ ಮನವಿಯಂತೆ ಸ್ವಯಂ ನಿವೃತ್ತಿ ಆದೇಶ ನೀಡಲಾಗುವುದು; ಕೃವಿವಿಯಿಂದ ವಯೋನಿವೃತ್ತಿ ಮತ್ತು ಸ್ವಯಂ ನಿವೃತ್ತಿ ಹೊಂದುವ ನೌಕರರಿಗೆ ಪಿಂಚಣಿ ಮತ್ತು ಪರಿವರ್ತಿತ ನಿವೃತ್ತಿ ವೇತನ (Commutation of Pension), ಕುಟುಂಬ ವೇತನ (Family pension) & ಪರಿವರ್ತನೆ ನಂತರದ ನಿವೃತ್ತಿ ವೇತನದ (Pension after commutation) ಆದೇಶವನ್ನು ನೀಡಲಾಗುವುದು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ವಿವಿಧ ಸಮಿತಿಗಳನ್ನು ಮಾಡಿ ಆದೇಶ ಹೊರಡಿಸಲಾಗುವುದು; ಬೋಧಕ ಮತ್ತು ನೌಕರ ಸಿಬ್ಬಂದಿಗಳು ಕಾರ್ಯಗಾರ/ತರಬೇತಿ/ಪ್ರವಾಸಕ್ಕೆ ಹೋಗಲು ಪ್ರವಾಸ ಕಾರ್ಯಕ್ರಮದ ಅನುಮತಿಯನ್ನು ನೀಡಲಾಗುವುದು. ತರಬೇತಿ ಕಾರ್ಯಕ್ರಮಕ್ಕೆ ಬೋಧಕ ಮತ್ತು ನೌಕರ ಸಿಬ್ಬಂದಿಗಳು ಹೋದಾಗ ನೊಂದಣಿ ಶುಲ್ಕ (ರಿಜಿಸ್ಟ್ರೇಷನ್ ಫೀ) ಮರುಪಾವತಿಸಲು ಆದೇಶ ನೀಡಲಾಗುವುದು. ಕೃಷಿ ವಿಶ್ವವಿದ್ಯಾನಿಲಯದ ಮೇಲೆ ನೌಕರರ ಸಿಬ್ಬಂದಿ /ಬೇರೆಯವರು/ ಸಾರ್ವಜನಿಕರು ದಾವೆ ಹೂಡಿದಾಗ ಇವುಗಳ ಬಗ್ಗೆ ಸೂಕ್ತ ಕ್ರಮ ವಹಿಸಲಾಗುವುದು.

ಸಾರ್ವಜನಿಕರು ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿಯಲ್ಲಿ ಬಂದಂತಹ ಈ ಕಛೇರಿಗೆ ಸಂಬಂಧಿಸಿದ ಅರ್ಜಿಗಳಿಗೆ ಮಾಹಿತಿಯನ್ನು ನೀಡಲಾಗುವುದು. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಮಹಾವಿದ್ಯಾಲಯಗಳು/ಸಂಶೋಧನಾ ಕೇಂದ್ರಗಳು/ ವಿಸ್ತರಣಾ ನಿರ್ದೇಶನಾಲಯಗಳಿಂದ ಮಾಹಿತಿ ಹಕ್ಕು ಅಧಿನಿಯಮದ ಅರ್ಜಿಯ ಬಗ್ಗೆ ಮಾಹಿತಿ ಪಡೆದು ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸಲಾಗುವುದು. ಈ ಕಛೇರಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಬರುವ ಪ್ರಶ್ನೆಗಳಿಗೆ/ ಪತ್ರಗಳಿಗೆ ಮಾಹಿತಿಯನ್ನು ಒದಗಿಸಲಾಗುವುದು.

ಆಡಳಿತಾಧಿಕಾರಿಗಳು

ಡಾ ಗೋಪಿನಾಥ್. ಜಿ.
ಪ್ರಾಧ್ಯಾಪಕರು
(ತೋಟಗಾರಿಕೆ)ಮತ್ತು
ಆಡಳಿತಾಧಿಕಾರಿಗಳು